This question paper consists of 33 questions and 16 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 33 ಪ್ರಶ್ನೆಗಳಿದ್ದು 16 ಮುದ್ರಿತ ಪುಟಗಳನ್ನು ಹೊಂದಿದೆ.

Roll No.
ರೋಲ್ ನಂ. | | | | | | | | | | | | |

Code No. 68/S/O/K
ಕೋಡ್ ನಂ.

Set / ಸೆಟ್ - A

# KANNADA

# ಕನ್ನಡ

# (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ______________________

Signature of Invigilators 1. ______________________
ಉಸ್ತುವಾರಿದಾರರ ರುಜು
2. ______________________

## ಸಾಮಾನ್ಯ ಸೂಚನೆಗಳು:

1 ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ನಿಮಗೆ ಕೊಟ್ಟಿರುವ ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು.

2 ಈ ಪ್ರಶ್ನೆ-ಪತ್ರಿಕೆಯನ್ನು ಓದಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ-ಪತ್ರಿಕೆಯನ್ನು ಮಧ್ಯಾಹ್ನ 02.15 ಗಂಟೆಗೆ ಕೊಡಲಾಗುವುದು. 02.15 ರಿಂದ 02.30 ರ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಮಾತ್ರ ಓದಬೇಕು ಮತ್ತು ಆ ಸಮಯದಲ್ಲಿ ಉತ್ತರ-ಪತ್ರಿಕೆಯಲ್ಲಿ ಯಾವುದೇ ಉತ್ತರ ಬರೆಯಕೂಡದು.

3 ವಿದ್ಯಾರ್ಥಿಗಳು ಪ್ರಶ್ನೆ - ಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

4 ನಿಮಗೆ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆ-ಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಒಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.

5 ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

6 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

7 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದುವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಹಗೊಳಿಸಲಾಗುವುದು.

8 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ 68/S/O/K ಸೆಟ್ A ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



Unnati Educations
9899436384, 9654279279

# KANNADA

# ಕನ್ನಡ

# (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : **100**

ಸೂಚನೆಗಳು ಃ **(i)** ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

**(ii)** ಪ್ರಶ್ನೆಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

**(iii)** ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಿರಿ.

---

ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಿ.

ಸಾಯಂಕಾಲ ಏಳು ಗಂಟೆಯ ಹೊತ್ತಿಗೆ ಹಳ್ಳಿಯ ಹೆಂಗಸರೆಲ್ಲಾ ದನಗಳನ್ನು ಮನೆಗಳಲ್ಲಿ ಕಟ್ಟಿಹಾಕಿ ಅವುಗಳ ಹಾಲು ಕರೆದು, ಅವುಗಳ ಮುಂದೆ ಹುಲ್ಲು ಹಾಕಿ ಆಟದ ಚಪ್ಪರದ ಮುಂದೆ ಬಂದು ಕುಳಿತರು. ಆಟದ ಬಯಲು ಅವರ ನಗುವಿನ, ಗೆಲುವಿನ ಧ್ವನಿಯಿಂದಲೂ ಕಡಗಗಳ ಶಬ್ದದಿಂದಲೂ ತುಂಬಿ ಹೋಯಿತು. ಮಧ್ಯ ಮಧ್ಯ ಎಲೆ ಅಡಿಕೆಯನ್ನು ಅಗಿಯುತ್ತ, ಒಬ್ಬರಿಂದೊಬ್ಬರು ತೆಗೆದುಕೊಳ್ಳುತ್ತ ಬಹುದೂರ ಕೇಳುವಂತೆ ಗಟ್ಟಿಯಾಗಿ ನಗುತ್ತಿದ್ದರು.

ಸಾಬಿ ನನ್ನನ್ನು ಬೇಗ ಬರಹೇಳಿದುದರಿಂದ ನಾನು ಒಂಭತ್ತು ಗಂಟೆಯ ವೇಳೆಗೆ ಆಟದ ಬಯಲಿಗೆ ಹೋದೆನು. ಹಳ್ಳಿಯ ಎಲ್ಲಾ ಆನಂದವನ್ನು ಅನುಭವಿಸಬೇಕೆಂದಿದ್ದ ಗುಂಡನೂ ನನ್ನೊಂದಿಗೆ ಬಂದನು.

ಆ ವೇಳೆಗೆ ಸ್ತ್ರೀ ಪುರುಷರ ದೊಡ್ಡ ಗುಂಡೇ ಸೇರಿದ್ದಿತು. ಅವರೆಲ್ಲರೂ ಆನಂದದಿಂದ ಮನಬಂದಂತೆ ನೆಲದ ಮೇಲೆ ಕುಳಿತು ಮಾತನಾಡುತ್ತಿದ್ದರು. ಗುಂಡ ಇವರ ಸಂತೋಷವನ್ನು ನೋಡಿ ನನಗೆ ಹೊಟ್ಟೆ ಕಿಚ್ಚಾಗುತ್ತೆ, ಹಗಲೆಲ್ಲ ಕೆಲಸ ಮಾಡುತ್ತಾರೆ. ಈಗ ಹಕ್ಕಿಗಳಂತೆ ಆನಂದದಿಂದ ಇದ್ದಾರೆ ಎಂದನು.

ಅಷ್ಟು ಹೊತ್ತಿಗೆ ಶಾಲುಸಾಬಿ ಬಂದನು. ಅವನನ್ನು ನೋಡಿ ಹೆಂಗಸರ ಸದ್ದು ಸ್ವಲ್ಪ ಕಡಿಮೆಯಾಯಿತು. ಸಾಬಿ ಬಂದ ಕೂಡಲೇ ಆಟಗಾರರೆಲ್ಲ ಚಪ್ಪರಕ್ಕೆ ಬಂದರು ಪರದೆಯ ಹಿಂದುಗಡೆ ಪ್ರತಿಯೊಬ್ಬನೂ ತನತನಗೆ ಮನಸ್ಸು ಬಂದಂತೆ ಬಣ್ಣವನ್ನು ಬಳಿದುಕೊಂಡರು. ಚಂದ್ರಮತಿಯು ವೇಷಧಾರಿಯಾದ ಮಾದ ಜೇಡಿದಾರರ ಮನೆಯಿಂದಲೇ ಒಂದು ಬಣ್ಣದ ಸೀರೆಯನ್ನು ಎರವಲು ತಂದಿದ್ದನು. ಹರಿಶ್ಚಂದ್ರ ಶಾಲುಸಾಬಿಯ ರುಮಾಲನ್ನೇ ಅವನ ತಲೆಯ ಮೇಲಿಂದ ತೆಗೆದು ತನ್ನ ತಲೆಯ ಮೇಲೆ ಇಟ್ಟುಕೊಂಡಿದ್ದನು. ಹರಿಶ್ಚಂದ್ರ ರಂಗಸ್ಥಳಕ್ಕೆ ಬಂದ ಕುಡಲೇ ಶೀನಪ್ಪ "ಇದು ಸಾಬಿಯ ರುಮಾಲು" ಎಂದನು.



Unnati Educations
9899436384, 9654279279

1 ಗದ್ಯಭಾಗವನ್ನು ಓದಿ ಅರ್ಥಮಾಡಿಕೊಂಡಿರುವ ಪ್ರಕಾರ ಈ ಕೆಳಕಂಡ ವಾಕ್ಯಗಳು ಸರಿಯೇ/ತಪ್ಪೇ ತಿಳಿಸಿ. 3×1=3

(A) ಸಾಯಂಕಾಲ ಏಳು ಗಂಟೆಯ ಹೊತ್ತಿಗೆ ಹಳ್ಳಿಯ ಹೆಂಗಸರು ಕೆಲಸ ಮುಗಿಸಿ ಆಟದ ಚಪ್ಪರದ ಮುಂದೆ ಬಂದು ಕುಳಿತರು.

(B) ಆಟದ ಬಯಲು ಹೆಂಗಸರ ನಗುವಿನ, ಧ್ವನಿಯಿಂದ ಕೂಡಿರಲಿಲ್ಲ.

(C) ನಿರೂಪಕರ / ಲೇಖಕರ ಜೊತೆಗೆ ಗುಂಡನೂ, ರಾತ್ರಿ ಒಂಬತ್ತು ಗಂಟೆಗೆ ಆಟದ ಬಯಲಿಗೆ ಹೋಗಿ ಸೇರಿದನು.

(D) ಹರಿಶ್ಚಂದ್ರ ಪಾತ್ರಧಾರಿ ಶಾಲು ಸಾಬಿಯ ರುಮಾಲನ್ನು ಧರಿಸಿದ್ದನು.

2 ಓದಿದ ಗದ್ಯಭಾಗಕ್ಕೆ ಸಂಬಂಧಿಸಿ ಕೆಳಗಿನ ಪ್ರಶ್ನೆಗಳಿಗೆ ಒಂದು 'ಪದ'ದಲ್ಲಿ ಉತ್ತರಿಸಿ. 3×1=3

(A) ಆಟದ ಬಯಲು ಯಾವುದರಿಂದ ತುಂಬಿ ಹೋಗಿತ್ತು?

(B) ಹೆಂಗಸರು ಮಾತಿನ ಮಧ್ಯೆ ಏನನ್ನು ಅಗಿಯುತ್ತಿದ್ದರು?

(C) ಹೆಂಗಸರನ್ನು ನೋಡಿ ಗುಂಡನಿಗೆ ಹೊಟ್ಟೆಕಿಚ್ಚಾಗಲು ಕಾರಣವೇನು?

(D) ಚಂದ್ರಮತಿಯ ಪಾತ್ರಧಾರಿ ಬಣ್ಣದ ಸೀರೆಯನ್ನು ಎಲ್ಲಿಂದ ತಂದಿದ್ದ?

3 ಸೂಚಿಸಿದಂತೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. 1×1=1

(i) ಶಬ್ದ ಈ ಪದದ ವಿರುದ್ಧ ಪದ

(A) ನಿಶ್ಶಬ್ದ (B) ಸದ್ದು

(C) ಗುಡುಗು (D) ಪದ

(ii) 'ನೆಲ' ಈ ಪದದ ಸಮಾನಾರ್ಥಕ ಪದ

(A) ಭೂಮಿ (B) ಭತ್ತ

(C) ನೀರು (D) ಮಣ್ಣು



Unnati Educations
9899436384, 9654279279

4 ಈ ಕೆಳಕಂಡ ಸಾಲುಗಳನ್ನು ಪರಾಮರ್ಶಿಸಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ: 5×1=5

'ನೀವು' ಸರ್ವಮಂಗಳಾ, ತುಮಕೂರು ನಿವಾಸಿ ಎಂದು ಭಾವಿಸಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ನಗರದ ಹೊರವಲಯದಲ್ಲಿರುವ 'ಕೆರೆಗಳಲ್ಲಿ' 'ಹೂಳು' ತುಂಬಿಕೊಂಡಿದೆ. ಇದರಿಂದಾಗಿ ಕೆರೆಯಲ್ಲಿ ನೀರು ಸಂಗ್ರಹವಾಗಲು ಸಾಧ್ಯವಾಗದೇ ವ್ಯವಸಾಯಕ್ಕೆ ನೀರಿನ ಕೊರತೆ ಉಂಟಾಗುತ್ತಿದೆ. ಇದರಿಂದ ಪರಿಸರ ಹಾನಿಗೆ ಕಾರಣವಾಗುತ್ತದೆ. ಆದ್ದರಿಂದ ಸಂಬಂಧಪಟ್ಟವರು ಕೆರೆಯ ಪುನರ್ ನವೀಕರಣದ ಬಗ್ಗೆ ಗಮನ ಹರಿಸುವಂತೆ ಮಾಡಲು ಒಂದು ಪತ್ರ ಬರೆಯಿರಿ.

(i) ಈ ಪತ್ರಕ್ಕೆ "ಸರಿಯಾದ" ವಿಷಯವನ್ನು ಆರಿಸಿ

(A) ಕೆರೆಯ ದುರಸ್ತಿ (B) ಕೆರೆಯ ನೀರು ಶೇಖರಣೆ

(C) ಕೆರೆಯ ಹೂಳೆತ್ತುವ ಬಗ್ಗೆ (D) ವ್ಯವಸಾಯಕ್ಕೆ ಅನುಕೂಲ

(ii) ಈ ಕೆಳಕಂಡ ಅಪೂರ್ಣ ವಾಕ್ಯವನ್ನು ಪೂರ್ಣಗೊಳಿಸಿ.

ನನ್ನ ಪತ್ರವು ________ ಎಂದು ಭಾವಿಸುತ್ತೇನೆ.

(A) ಪ್ರಜಾವಾಣಿ ಪತ್ರಿಕೆಯ ಪ್ರಸಾರದಲ್ಲಿ ಹೆಚ್ಚಳಕ್ಕೆ

(B) ಪತ್ರಿಕೆಯ ಸಂಪಾದಕರ ಸಂತೋಷಕ್ಕಾಗಿ

(C) ಕೆರೆಯ ಹೂಳೆತ್ತಿದರೆ ಕೆರೆ ನೀರು ಸಂಗ್ರಹಕ್ಕೆ ಯೋಗ್ಯವಾಗಿರುತ್ತದೆ

(D) ವ್ಯವಸಾಯಕ್ಕೆ ಅನುಕೂಲ ಹಾಗೂ ಪರಿಸರ ಸಂರಕ್ಷಣೆ

(iii) ಈ ಪತ್ರಕ್ಕೆ" ಸರ್ವಮಂಗಳಾ" ರವರು ಆಯ್ಕೆ ಮಾಡಿರುವ ಸಂಬಂಧಪಟ್ಟ ದೃಷ್ಟಿಕೋನ ಈ ರೀತಿ ಇದೆ.

(1) ದಿನಪತ್ರಿಕೆಯ ಹೆಸರು

(2) ಸರ್ವಮಂಗಳಾರವರ ವಿಳಾಸ

(3) ಸಮಸ್ಯೆ ಕುರಿತು ಔಪಚಾರಿಕ ಧ್ವನಿ

(4) ದಿನಪತ್ರಿಕೆಯ ಸದಸ್ಯತ್ವದ ಆಧಾರ

(5) ಪತ್ರ ಸ್ವೀಕರಿಸುವ ನಿರೀಕ್ಷಿತ ದಿನಾಂಕ

(A) (1) ಮತ್ತು (5) (B) (2), (3) ಮತ್ತು (4)

(C) (3) ಮತ್ತು (5) (D) (1), (3) ಮತ್ತು (4)



Unnati Educations
9899436384, 9654279279

(iv) ಕೆರೆಯ ಪುನರ್ ನವೀಕರಣಕ್ಕೆ ಸರ್ವಮಂಗಳಾರವರು ನೀಡುವ ಪ್ರಮುಖ ಕಾರಣವೇನು?

(A) ಕೆರೆಯಲ್ಲಿ "ಹೂಳು" ತುಂಬಿಕೊಂಡಿರುವುದು

(B) ಕೆರೆಯಲ್ಲಿ ನೀರು ಸಂಗ್ರಹ ಮಾಡಲು

(C) ಕೆರೆಯನ್ನು ಉಳಿಸಿಕೊಳ್ಳುವುದು

(D) ಪರಿಸರ ಹಾನಿಯಾಗದಂತೆ ರಕ್ಷಿಸುವುದು

(v) ಈ ಪತ್ರದ ತೀರ್ಮಾನಕ್ಕೆ ಸರಿಯಾದ ಮತ್ತು ನ್ಯಾಯ ದೊರಕಿಸುವಂತಹ ಆಯ್ಕೆಯನ್ನು ಮಾಡಿರಿ.

ನನ್ನ ಅಭಿಪ್ರಾಯದಲ್ಲಿ "ಮಾಧ್ಯಮಗಳು" ಹಳ್ಳಿಯ ಜನರನ್ನು ಜಾಗೃತಿಗೊಳಿಸಲು ಮಹತ್ವದ ಪಾತ್ರ ವಹಿಸುತ್ತವೆ. ಆದುದರಿಂದ ನನ್ನ ಆಲೋಚನೆಗಳು ದಿನಪತ್ರಿಕೆಗಳಲ್ಲಿ ಪ್ರಕಟಣೆಗೊಂಡರೆ ಹಳ್ಳಿಯ ಜನರು / ಸಾರ್ವಜನಿಕರು ಜಾಗೃತಿಗೊಂಡು ಬೆಂಬಲ ನೀಡುವರು. ದಯವಿಟ್ಟು ನನ್ನ ಆಲೋಚನೆಗಳನ್ನು ನಿಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸುತ್ತೀರಾ ಎಂದು ಭರವಸೆ ಇದೆ. ಏಕೆಂದರೆ ಸಂಬಂಧಪಟ್ಟ ಪ್ರಾಧಿಕಾರ ಮುಂದಿನ ಕ್ರಮ ತೆಗೆದುಕೊಳ್ಳಬಹುದು.

(A) ಹೌದು ಆಯ್ಕೆಗೆ (1) ಏಕೆಂದರೆ ಇದು ಅಧಿಕಾರಯುತ ಧ್ವನಿಯಾಗಿದೆ

(B) ಇಲ್ಲ, ಆಯ್ಕೆಗೆ (1) ಏಕೆಂದರೆ ಇದು ಅನೌಪಚಾರಿಕ ಧ್ವನಿಯಾಗಿದೆ

(C) ಹೌದು ಆಯ್ಕೆಗೆ (2) ಏಕೆಂದರೆ ಇದು ವಿನಮ್ರ ನಿರೀಕ್ಷಾ ಧ್ವನಿಯಾಗಿದೆ

(D) ಇಲ್ಲಿ ಆಯ್ಕೆಗೆ (2) ಏಕೆಂದರೆ ಇದು ನಿರೀಕ್ಷಾ ಧ್ವನಿಯಾಗಿದೆ



Unnati Educations
9899436384, 9654279279

**5** ಈ ಕೆಳಗೆ ಕೊಟ್ಟಿರುವ ಸಾಲುಗಳನ್ನು ಪರಾಮರ್ಶಿಸಿ ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ: **4×1=4**

ಕರ್ನಾಟಕ "ವಿದ್ಯುಚ್ಛಕ್ತಿ ಮಂಡಳಿ" ಬೆಂಗಳೂರು ಇವರು ವಿದ್ಯುಚ್ಛಕ್ತಿ ಲೈನುಗಳ ಮೇಲೆ ಮರದ ಕೊಂಬೆಗಳು ಬಿದ್ದಿರುವುದರಿಂದ ಬೆಂಗಳೂರು ರಾಜಾಜಿನಗರದ ಒಂದನೇ ಬ್ಲಾಕ್‌ನಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಆಗಲಿದೆ. ವಿದ್ಯುತ್ ಸರಬರಾಜನ್ನು ಸಮರ್ಪಕ ಮಾಡಲು ಲೈನು ದುರಸ್ತಿ ಕಾರ್ಯವನ್ನು ರಾಜಾಜಿನಗರ 1 ನೇ ಎನ್ ಬ್ಲಾಕ್‌ನಲ್ಲಿ ಬೆಳಿಗ್ಗೆ 6.00 ರಿಂದ ಸಾಯಂಕಾಲ 6.00 ಗಂಟೆಯವರೆಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ (ಇದು 12 ಗಂಟೆಯ ಅವಧಿಯ ಸೂಚನೆಯಾಗಿದೆ) ಎಂದು ಜೂನ್ 12 ರಂದು ಸೂಚನೆ ನೀಡಿರುತ್ತಾರೆ.

(i) ಮೇಲ್ಕಂಡ ಬರಹಕ್ಕೆ ಸೂಕ್ತ "ತಲೆಬರಹವನ್ನು ಆರಿಸಿ"

(A) ಮಾಹಿತಿ ಇರಲಿ (B) ಗಮನಿಸಿ / ಜಾಗೃತಿಗೆ

(C) ವಿದ್ಯುತ್ ಸರಬರಾಜು ನಿಲ್ಲಿಸುವಿಕೆ (D) ವಿದ್ಯುತ್ ಸಂಪರ್ಕದಲ್ಲಿ ಅಡಚಣೆ

ಅಥವಾ

ಮೇಲ್ಕಂಡ ಸೂಚನೆಗೆ ಸರಿಯಾಗಿ ವಿಷಯವನ್ನು ಗುರುತಿಸಿ.

(A) ಮಾಹಿತಿಯಲ್ಲಿರಿ (B) ಸಹಕರಿಸಲು ವಿನಂತಿ

(C) ಸಿದ್ಧರಾಗಿರಿ (D) ಅನನುಕೂಲತೆಗಾಗಿ ವಿಷಾದ

(ii) ಕಾರ್ಯನಿರ್ವಾಹಕ ಅಭಿಯಂತರರು ನೀಡಿರುವ ಸಲಹೆ- ಸೂಚನೆಗಳ ಅಂಶಗಳನ್ನು ಆರಿಸಿರಿ.

(A) ಲೈನ್ ದುರಸ್ತಿಯ ಅಗತ್ಯ

(B) ವಿದ್ಯುತ್ ಬಳಕೆಗೆ ಕಡಿವಾಣ ಹಾಕುವುದು

(C) ಶಾರ್ಕ್ ಸರ್ಕ್ಯೂಟ್ ನಿಂದಾಗುವ ಅಪಾಯ ತಪ್ಪಿಸುವುದು

(D) ಮೇಲಿನ ಎಲ್ಲವೂ

(iii) ಸೂಚನೆ ನೀಡಲು ಆಧಾರವಾಗಿರುವ ಅಂಶಗಳನ್ನು ಗುರುತಿಸಿ.

(A) ವಿದ್ಯುತ್ ಲೈನಿನ ಸಂಪರ್ಕ ಸರಿಪಡಿಸುವುದರ ಬಗ್ಗೆ ಮುಂಜಾಗ್ರತೆ ಕ್ರಮ.

(B) ಸಾರ್ವಜನಿಕರಿಗೆ ಸೂಚನೆ ನೀಡುವ ದಿನಾಂಕ

(C) ಲೈನು ದುರಸ್ತಿಯ ಕಾರಣ

(D) ಮೇಲಿನ ಎಲ್ಲವೂ



Unnati Educations
9899436384, 9654279279

**6** ಈ ಕೆಳಗಿನ ವ್ಯಕ್ತಿ ಚಿತ್ರಣವನ್ನು ಗಮನಿಸಿ ಸರಿಯಾಗಿ ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿ (4 ಕ್ಕೆ ಮಾತ್ರ). **4**

ಸಿದ್ದವನಹಳ್ಳಿ ಕೃಷ್ಣ ಶರ್ಮ ಅವರು ಚಿತ್ರದುರ್ಗ ಜಿಲ್ಲೆಯ ಸಿದ್ದವನಹಳ್ಳಿಯಲ್ಲಿ 1904 ಜುಲೈ 31 ರಂದು ಜನಿಸಿದರು. ತಂದೆ ರಂಗಾಚಾರ್ಯ, ತಾಯಿ ಶೇಷಮ್ಮ, ಹುಟ್ಟೂರಿನಲ್ಲೇ ಆರಂಭದ ಶಿಕ್ಷಣವನ್ನು ಮುಗಿಸಿ, ಚಿತ್ರದುರ್ಗ ಮೈಸೂರುಗಳಲ್ಲಿ ಪ್ರಥಮ ಬಿ.ಎ. ವರೆಗೂ ಓದಿದರು, ಸ್ವಾತಂತ್ರ್ಯ ಹೋರಾಟಗಾರರಾದ ಇವರು ಶಿಕ್ಷಕ, ಕನ್ನಡ ಪತ್ರಿಕೋದ್ಯಮ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯವರಾಗಿ ಹಾಗೂ ಅನುವಾದಕರಾಗಿ ಕೆಲಸ ಮಾಡಿದ್ದಾರೆ. ವಿಶ್ವ ಕರ್ನಾಟಕ ವಾಹಿನಿ, ಜಯ ಕರ್ನಾಟಕ, ನವೋದಯ, ಭೂದಾನ, ಕನ್ನಡ ನುಡಿ ಪತ್ರಿಕೆಗಳ ಸಂಪಾದಕರಾಗಿದ್ದರು. ಯತಿರಾಜ, ರಾಮಾನುಜ ವಾರ್ಧಾಯಾತ್ರೆ, ನವೋದಯ ಯಾತ್ರೆ ರಾಮನಾಮ ಆಶ್ರಮಯ ಜೀವನ, ವಿನೋಭಾ, ಭೂದಾನ, ಕನ್ನಡದ ಕಿಡಿಗಳು, ದೀಪಮಾಲೆ, ಕುಲದೀಪಕರು, ರಾಜೇಂದ್ರ ಪ್ರಸಾದ್, ಮೋತಿಲಾಲ್ ಜವಹರಲಾಲ್ - ನೆಹರು, ಕಸ್ತೂರಿಬಾ, ಅವರ ಸ್ವತಂತ್ರ ಕೃತಿಗಳು. ಗಾಂಧೀಜಿ ಅವರ ಹಿಂದ್ ಸ್ವರಾಜ್ಯ, ಆರೋಗ್ಯ ರಹಸ್ಯ, ಸಂವಾದ ಮಾಲೆ, ಆತ್ಮಕಥೆ ಗೀತಮಾತೆ, ಮೀನೊಮಪಾನಿ - ಅವರ ನಮ್ಮ ಹಿಂದೂಸ್ಥಾನ, ನೆಹರು ಅವರ ಗಾಂಧಿ, ಕೃಪಲಾನಿ ಅವರ ಮೂಲ ಶಿಕ್ಷಣ ಇವು ಇವರ ಮುಖ್ಯವಾದ ಅನುವಾದ ಕೃತಿಗಳು. 'ಸಿದ್ಧಹಸ್ತ' ಅವರ ಅಭಿನಂದನ ಕೃತಿ. 1973 ರಲ್ಲಿ ಶ್ರೀಯುತರು ನಿಧನರಾದರು.

(i) ಕೃಷ್ಣ ಶರ್ಮರವರು ಹುಟ್ಟಿದ ಊರು

(A) ಸಿದ್ದವನ ಹಳ್ಳಿ (B) ಹೊಸದುರ್ಗ

(C) ಚಿತ್ರದುರ್ಗ (D) ಬೆಂಗಳೂರು

(ii) ಕೃಷ್ಣ ಶರ್ಮರವರು ಪ್ರಾಥಮಿಕ ಶಿಕ್ಷಣ ಪಡೆದದ್ದು

(A) ಸಿದ್ದವನ ಹಳ್ಳಿ (B) ಮೈಸೂರು

(C) ಬೆಂಗಳೂರು (D) ಚಿತ್ರದುರ್ಗ

(iii) ಕೃಷ್ಣ ಶರ್ಮರವರು ಕಾರ್ಯದರ್ಶಿಯವರಾಗಿ ಸೇವೆ ಸಲ್ಲಿಸಿದ್ದು.

(A) ಕನ್ನಡ ಸಾಹಿತ್ಯ ಪರಿಷತ್ತು (B) ಕಲಾಪರಿಷತ್ತು

(C) ಜಾನಪದ ಸಾಹಿತ್ಯ ಪರಿಷತ್ತು (D) ನಾಟಕ ಪರಿಷತ್ತು

(iv) ಕೃಷ್ಣ ಶರ್ಮ ಬರೆದ ಸ್ವತಂತ್ರ ಕೃತಿ

(A) ಜಯ ಕರ್ನಾಟಕ (B) ನವೋದಯ ಯಾತ್ರೆ

(C) ಆರೋಗ್ಯಕರ ರಹಸ್ಯ (D) ಕನ್ನಡ ಪತ್ರಿಕೋದ್ಯಮ

(v) ಕೃಷ್ಣ ಶರ್ಮರ ತಂದೆಯ ಹೆಸರು

(A) ರಂಗಾಚಾರ್ಯ (B) ಸೀತಾರಾಮ

(C) ಕೃಪಾಚಾರ್ಯ (D) ವೆಂಕಟಚಾರ್ಯ



Unnati Educations
9899436384, 9654279279

## ವ್ಯಾಕರಣ

7 ಈ ಕೆಳಗೆಕೊಟ್ಟಿರುವ ಪದಗಳನ್ನು ಬಳಸಿ ಸೂಕ್ತ ವಾಕ್ಯಗಳನ್ನು ರಚನೆಮಾಡಿ (3 ಕ್ಕೆ ಮಾತ್ರ). 1×3=3

(1) ಶಾಲೆ (2) ಮಂಟಪ

(3) ಪತ್ರಿಕೆ (4) ಗುರಿ

ಅಥವಾ

ಈ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಓದಿ ಅವುಗಳ ಶುದ್ಧರೂಪ ಬರೆಯಿರಿ (3 ಕ್ಕೆ ಮಾತ್ರ).

(1) ಬೂರಿ ಬೋಜನ, ತುಪದ ಅನ, ಪಕಾನ

(2) ಪರಮಾನ, ಉತಷವಾದ, ಸಿಹಿಯೂಟ

(3) ಹುಲು ಮೊರಡಿಯಲಿ ಹೆಬಾವು

(4) ನಿಲೆಗೌಡ ಕಾಡಿಗೆ ಹೆಜೇನ ಬೇಟೆಗೆ ಹೋದನು

8 ಈ ಕೆಳಗಿನ ಪದಗಳನ್ನು ಕೂಡಿಸಿ ಸಂಧಿ ಹೆಸರಿಸಿ. 3×1=3

(1) ಅರುಣ + ಉದಯ

(2) ದೇವ + ಆಲಯ

(3) ಸಕಲ + ಐಶ್ವರ್ಯ

ಅಥವಾ

ಈ ಕೆಳಕಂಡ ಪದಗಳನ್ನು ಬಿಡಿಸಿ ಸಂಧಿಯ ಹೆಸರು ತಿಳಿಸಿ

(1) ಇತ್ಯಾದಿ

(2) ದುಗುಡವನ್ನು

(3) ಪರಮಾಪ್ತ



Unnati Educations
9899436384, 9654279279

9 ಈ ಕೆಳಕಂಡ ವಾಕ್ಯಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 3×1=3

(1) ಸೀತೆಯು ರಾಮನ ಜೊತೆ ವನವಾಸಕ್ಕೆ ಹೋದಳು.

'ಸೀತೆ' ಇದರ ವಚನರೂಪ

(2) ರಾವಣನು ಸೀತೆಯನ್ನು ಅಪಹರಿಸಿದನು.

"ಅಪಹರಿಸಿದನು" ಈ ಪದದ ರೂಪವನ್ನು ತಿಳಿಸಿ.

(3) ಆಂಜನೇಯ ಸಂಜೀವಿನಿ ಪರ್ವತವನ್ನು ಹೊತ್ತು ತಂದನು.

"ಪರ್ವತವನ್ನು" ಇದರಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ.

ಅಥವಾ

ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.

(1) ಚೌರದವ ________ ಎಂದು ಹೇಳಿ ಗಿಡನೆಟ್ಟನು.

(ಅ) ರಾಜನ ಮಗನ ಕಿವಿ ಕತ್ತೆ ಕಿವಿ (ಆ) ನಾನು ಸತ್ಯವನ್ನೆ ಹೇಳುತ್ತೇನೆ

(ಇ) ಸತ್ಯ ಸುಳ್ಳಾಗುವುದಿಲ್ಲ (ಈ) ಎಂದಾದರು ಸಾಯಲೇಬೇಕು

(2) ಕಿವಿ ಎಂಬುದು ________ ಹೆಸರು.

(ಅ) ನರಿ (ಆ) ಕೋಳಿ

(ಇ) ನಾಯಿ (ಈ) ಹಸು

(3) ಡಾರ್ವಿನನ ವಿಕಾಸವಾದದಂತೆ ಮನುಷ್ಯನ ಮೂಲ ________

(ಅ) ದೇವರು (ಆ) ಅಮೀಬ

(ಇ) ಮಂಗ (ಈ) ಚಿಂಪಾಂಜಿ

10 ಈ ಕೆಳಕಂಡ ಬಿಟ್ಟ ಸ್ಥಳಗನ್ನು ಸೂಕ್ತ ಕ್ರಿಯಾಪದಗಳಿಂದ ಭರ್ತಿಮಾಡಿ (4 ಕ್ಕೆ ಮಾತ್ರ) 4×1=4

(1) ರಾಮನು ಕಾಡಿಗೆ ________

(2) ಸೀತಾಳ ಹೃದಯದ ಶಸ್ತ್ರ ಚಿಕಿತ್ಸೆ ________

(3) ಕಾನನದ ಮಧ್ಯ ಸಿಂಹ ________

(4) ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳು ಒಂದು ದಿನದ ಪ್ರವಾಸವನ್ನು ________

(5) ನನ್ನ ಜನಗಳು ಹೊಲವನ್ನು ________



Unnati Educations
9899436384, 9654279279

11 ಈ ಕೆಳಕಂಡ ವಾಕ್ಯಗಳಲ್ಲಿನ ಲೇಖನ ಚಿಹ್ನೆಗಳನ್ನು ಗುರುತಿಸಿ. (2 ಕ್ಕೆ ಮಾತ್ರ) 2×1=2

(1) ಬೀಜವಿಲ್ಲದೆ ಮರವಿಲ್ಲ ಮರವಿಲ್ಲದೆ ಬೀಜವಿಲ್ಲ

(2) ಪೆರುವಿನ ಕಣಿವೆಯು ಪವಿತ್ರ

(3) ಚೇತನಕ್ಕೆ ಸುಖದಾಯಕವಾದ ಅನುಭವ ಯಾವುದು?

12 ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. (3 ಕ್ಕೆ ಮಾತ್ರ) 3×1=3

(1) ನುಡಿದಂತೆ ನಡೆಯದಿದ್ದರೆ ________ ಒಲಿಯನು.

(ಗುಹೇಶ್ವರ, ಕೂಡಲಸಂಗಮದೇವ, ಚೆನ್ನಮಲ್ಲಿಕಾರ್ಜುನ)

(2) ________ ಆತ್ಮ ಲಂಕೆಯನ್ನು ಬಿಟ್ಟು ಹೋಗಲಾರದು.

(ಮಂಡೋದರಿ, ಸೀತಾದೇವಿ, ರಾವಣ, ವಿಭೀಷಣ)

(3) ಅಮೃತವನ್ನೇ ಕಡೆಗಣಿಸುವಷ್ಟು ಹಿತವಾದ ________.

(ವೀರ, ಕೋಪ, ಶೃಂಗಾರ)

(4) ಮಾದೇಶ್ವರರು ________ ಹತ್ತಿರ ಭಿಕ್ಷೆ ಬೇಡಿದರು.

(ಅ) ನಿಲೆಗೌಡ (ಆ) ಬಿಲ್ಲಯ್ಯ

(ಇ) ಕಾರಯ್ಯ (ಈ) ಶಂಕಮ್ಮ

13 ಸರಿ ಅಥವಾ ತಪ್ಪು ತಿಳಿಸಿ (3 ಕ್ಕೆ ಮಾತ್ರ) 3×1=3

(1) ಡಾರ್ವಿನ ಪ್ರತಿಪಾದಿಸಿದ ಸಿದ್ಧಾಂತ ವಿಕಾಸವಾದ.

(2) ಲೇಖಕರ ಶತ್ರು ಅಲಾರಾಂ ಗಡಿಯಾರ.

(3) ತುಂಬಿದ ಹೊಳೆಯಾಗೆ ಕೊಂಬು ಕಾಣಿಸುವುದಿಲ್ಲ.

(4) ಭಯ ಕಾಯಿಲೆಯ ಚಿಹ್ನೆಗಳನ್ನು ಹೆಚ್ಚಿಸುತ್ತದೆ.



Unnati Educations
9899436384, 9654279279

14 ಈ ಕೆಳಕಂಡ ಗದ್ಯವನ್ನು ಓದಿರಿ ಹಾಗೂ ಕೆಳಕಂಡ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ. 3×1=3

ಅಕ್ಕಮಹಾದೇವಿಯು, ಮಾನವ ಸಮಾಜ ಜೀವಿ, ಎಲ್ಲರೊಡನೆ ಹೊಂದಿಕೊಂಡು ಬಾಳಬೇಕು, ಇಲ್ಲದಿದ್ದರೆ ಕಷ್ಟ ಎಂದು ತಿಳಿಸಿದ್ದಾರೆ. ಉದಾ-ಗೆ ಬೆಟ್ಟದಮೇಲೆ ಮನೆಯ ಕಟ್ಟಿ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳದೆ ಭಯಪಟ್ಟು ಪ್ರಾಣಿಗಳಿವೆ ಎಂದು ಹೇಳುವುದು ವ್ಯರ್ಥ.

ಸಂತೆಯ ಮಧ್ಯದಲ್ಲಿ ಮನೆಯನ್ನು ಕಟ್ಟಿ ಶಬ್ದ ಎಂದರೇನು ಪ್ರಯೋಜನ. ಶಬ್ದಕ್ಕೆ ಹೊಂದಿಕೊಂಡು ಬಾಳಬೇಕು. ಜಗತ್ತಿನಲ್ಲಿ ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಸಮಾಧಾನ ಚಿತ್ತದಿಂದ ಇರಬೇಕು. ಮಾನವ ಎಂದಿಗೂ ಸಮಾಧಾನ ಚಿತ್ತದಿಂದ ಹೊಂದಿಕೊಂಡು ಬಾಳುವ ಬಗೆಯನ್ನು ಅಕ್ಕಮಹಾದೇವಿ ತಿಳಿಸಿದ್ದಾರೆ.

(1) ಅಕ್ಕಮಹಾದೇವಿ ಮಾನವ ________ ಎಂದು ತಿಳಿಸಿದ್ದಾರೆ.

(2) ಬೆಟ್ಟದ ಮೇಲೆ ಮನೆಯ ಮಾಡಿದರೆ ________ ಗಳಿಗೆ ಹೆದರಬಾರದು.

(3) ಸಂತೆಯೊಳಗೆ ಮನೆಯ ಮಾಡಿದರೆ ________ ಕ್ಕೆ ಅಂಜಬಾರದು.

(4) ಸಮಾಜದಲ್ಲಿ ಕಷ್ಟ ಬಂದಾಗ ________ ಸುಖ ಬಂದಾಗ ________ ಸಮಾಧಾನ ಚಿತ್ತದಿಂದಿರಬೇಕು.

15 ಈ ಕೆಳಕಂಡ ಗದ್ಯವನ್ನು ಓದಿ ಈ ಕೆಳಕಂಡ ವಾಕ್ಯಗಳು ಸರಿಯೇ, ತಪ್ಪೇ, ಎಂದು ತಿಳಿಸಿ. 3×1=3

ವೈದ್ಯರು ಬರೆದುಕೊಟ್ಟ ಔಷಧಿಗಳನ್ನು ಕೊಂಡುಕೊಳ್ಳುವಾಗ ವಿಶೇಷ ಎಚ್ಚರಿಕೆಯನ್ನು ವಹಿಸುವುದು ಅತಿ ಅವಶ್ಯ. ವೈದ್ಯರು ಬರೆದಿರುವುದನ್ನೆ ಅಂಗಡಿಯಾತ ಕೊಟ್ಟಿದ್ದಾನೆಯೇ ಎಂದು ಖಾತ್ರಿಮಾಡಿಕೊಳ್ಳಿ. ಮಾತ್ರೆಯ ಪ್ರಮಾಣ ಸರಿಯಾಗಿದೆಯೇ ನೋಡಿಕೊಳ್ಳಿ. ಉದಾ- 25 ಮಿಲಿಗ್ರಾಂ ಮಾತ್ರೆ ಬದಲು 10 ಮಿಲಿಗ್ರಾಂ ಮಾತ್ರೆ ಕೊಡದಂತೆ ನೋಡಿಕೊಳ್ಳಿ. ಜತೆಗೆ ಔಷಧಿ ತಯಾರಾದ ತಾರೀಖು ಮತ್ತು ಅದರ ಅವಧಿ ಮುಗಿಯುವ ತಾರೀಖನ್ನು ಗಮನಿಸಿ. ತುಂಬಾ ಹಳೆಯ ಔಷಧ ಅಥವಾ ಅವಧಿ ಮುಗಿದ ಔಷಧ ಸೇವಿಸುವುದು ನಿಷ್ಪ್ರಯೋಜಕ, ಅಲ್ಲದೆ ಅಪಾಯಕಾರಿ ಕೂಡ. ಖೋಟಾ ಔಷಧಿ ಅಥವಾ ಕಳಪೆ ಔಷಧಗಳ ಬಗ್ಗೆ ಎಚ್ಚರಿಕೆ ಇರಲಿ. ಯಾವ ಬಗೆಯ ಅನುಮಾನ ಬಂದರೂ ತಕ್ಷಣ ನಿಮ್ಮ ವೈದ್ಯರಿಗೆ ತೋರಿಸಿ. ಬಹಳ ಕಾಲ ತೆಗೆದುಕೊಳ್ಳಬೇಕಾದ ಔಷಧವನ್ನು ಸಾಕಷ್ಟು ಕೊಂಡು ಕೊಂಡು ಸುರಕ್ಷಿತ ಸ್ಥಳದಲ್ಲಿಟ್ಟು ಮುತುವರ್ಜಿಯಿಂದ ಸೇವಿಸಿ.

(1) ಔಷಧಿಗಳನ್ನು ಕೊಂಡುಕೊಳ್ಳುವಾಗ ವಿಶೇಷ ಎಚ್ಚರಿಕೆ ವಹಿಸುವ ಅಗತ್ಯವಿಲ್ಲ.

(2) 25 ಮಿಲಿಗ್ರಾಂ ಮಾತ್ರೆ ಬದಲು 10 ಮಿಲಿಗ್ರಾಂ ಮಾತ್ರೆ ಕೊಡಬಾರದು.

(3) ಅವಧಿ ಮುಗಿದ ಔಷಧಿ ಸೇವಿಸುವುದು ಅಪಾಯಕಾರಿಯಾಗಿದೆ.

(4) ಔಷಧಗಳ ಬಗ್ಗೆ ಅನುಮಾನ ಬಂದಾಗ ವೈದ್ಯರ ಬಳಿ ತೋರಿಸುವ ಅಗತ್ಯವಿಲ್ಲ.



Unnati Educations
9899436384, 9654279279

16 ಹೊಂದಿಸಿ ಬರೆಯಿರಿ. 3×1=1

| | | | |
|---|---|---|---|
| (a) | ತಲೆನೋವು | (a) | ಹುತ್ತ |
| (b) | ಮದುವೆ | (b) | ಔಷಧ |
| (c) | ಹಾವು | (c) | ವಿವಾಹ |

ಈ ಕೆಳಕಂಡ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ:-

ದಕ್ಷಿಣ ದೇಶದ ಒಬ್ಬ ಪಂಡಿತರು ಸೂರ್ಯಗ್ರಹಣ ವಿಮೋಚನೆಯಾದ ಮೇಲೆ ಕಾವೇರಿ ನದಿಗೆ ಸ್ನಾನ ಮಾಡಲು ಹೋದರು. ನದಿಯಲ್ಲಿ ಆಗಲೇ ಅನೇಕ ಮಂದಿ ಸ್ನಾನ ಮಾಡುತ್ತಿದ್ದರು. ನದಿಯ ದಂಡೆಯ ಮೇಲೆ ಎಲ್ಲೆಲ್ಲೂ ತಾಮ್ರದ ತಂಬಿಗೆಗಳಿದ್ದುವು. ಆ ಪಂಡಿತರು ತಮ್ಮ ತಾಮ್ರದ ತಂಬಿಗೆಯನ್ನು ಆ ದಂಡೆಯ ಮೇಲಿಟ್ಟು ಗುರುತಿಗಾಗಿ ಆ ತಂಬಿಗೆಯೊಳಕ್ಕೆ ಸ್ವಲ್ಪ ಮರಳನ್ನು ಹಾಕಿ ಸ್ನಾನಕ್ಕಾಗಿ ನದಿಗೆ ಇಳಿದರು. ಆ ವಿದ್ವಾಂಸರು ಮರಳು ಹಾಕಿದ್ದನ್ನು ನೋಡಿದ ಇತರ ಅನೇಕ ಮಂದಿ "ಇದರಲ್ಲಿ ಏನೋ ವಿಶೇಷ ಅರ್ಥವಿದೆ" ಎಂದು ಭಾವಿಸಿ ತಾವು ಕೂಡ ತಮ್ಮ ತಮ್ಮ ತಂಬಿಗೆಗಳಿಗೆ ಸ್ವಲ್ಪ ಸ್ವಲ್ಪ ಮರಳನ್ನು ಹಾಕಿದರು. ವಿದ್ವಾಂಸರು ಸ್ನಾನ ಮುಗಿದ ಮೇಲೆ ತಮ್ಮ ತಂಬಿಗೆಯನ್ನು ಹುಡುಕಲು ಪರದಾಡಬೇಕಾಯಿತು. ಬಹು ತಂಬಿಗೆಗಳಲ್ಲಿ ಮರಳು. "ಅಯ್ಯೋ ಭಗವಂತ, ಹೀಗೂ ಉಂಟೇ?" ಎಂದು ಆ ವಿದ್ವಾಂಸರು ತಲೆ ಚಚ್ಚಿಕೊಂಡರು.

ಜನಗಳು ಮಾಡಿದ್ದು ಅರ್ಥವಿಲ್ಲದ ಅನುಕರಣೆ. ಗ್ರಹಣದ ದಿನ ಪಂಡಿತರು ಮಾಡಿದ್ದು ಎಲ್ಲಾ ಅನುಕರಣೆ, ಅಪ್ಪ ಮಾಡಿದ್ದನ್ನು ಮಗ ಯಾಂತ್ರಿಕವಾಗಿ ಮಾಡುತ್ತಾನೆ. ಮಾಡುವ ಕೆಲಸಗಳಿಗೆ ಅವನು ಅರ್ಥ ಕೇಳುವ ಗೋಜಿಗೆ ಹೋಗುವುದಿಲ್ಲ. ಕರ್ಮಗಳಿಗೆ ಅರ್ಥ ಕೇಳುವ ಮನೋಭಾವನೆಯನ್ನು ದೊಡ್ಡವರು ರೂಪಿಸಿಲ್ಲ. ಅಪ್ಪಿತಪ್ಪಿ ಇಂತಹ ಪ್ರಶ್ನೆಗಳನ್ನು ಕೇಳಿದಾಗ ತಾರ್ಕಿಕ ಮನೋಭಾವ "ತಲೆಹರಟೆ" ಮನೋಭಾವವಾಗಿರುತ್ತದೆ.

17 ದಕ್ಷಿಣ ದೇಶದ ಪಂಡಿತರು ಗ್ರಹಣ ವಿಮೋಚನಯ ನಂತರ ಎಲ್ಲಿಗೆ, ಏತಕ್ಕಾಗಿ ಹೋದರು? 2×1=2

ಅಥವಾ

18 ನದಿಯ ದಂಡೆಯ ಮೇಲೆ ಎಲ್ಲಾ ಪಂಡಿತರು ಯಾವ ವಸ್ತುಗಳನ್ನಿಟ್ಟದ್ದರು?

19 ಪಂಡಿತರು ತಮ್ಮ ವಸ್ತುಗಳನ್ನು ಗುರುತಿಸಲು ಅದರೊಳಗೆ ಏನನ್ನು ಹಾಕಿದ್ದರು? 2×1=2

ಅಥವಾ

20 ಪಂಡಿತರು ವಿಶೇಷ ಅರ್ಥವಿದೆ ಎಂದು ಏತಕ್ಕಾಗಿ ಭಾವಿಸಿದರು?



Unnati Educations
9899436384, 9654279279

21 ಜನಗಳು ಹೇಗೆ, ಯಾವ ರೀತಿ ಅನುಕರಣೆ ಮಾಡುತ್ತಾರೆ? ತಾರ್ಕಿಕ ಮನೋಭಾವವನ್ನು ತಿಳಿಸಿ. 2×1=2

ಅಥವಾ

22 ಅಪ್ಪ ಮಾಡಿದ ಕೆಲಸಗಳನ್ನು ಮಗ ಪ್ರಶ್ನಿಸಿದಾಗ ಅದು ಯಾವ ಮನೋಭಾವವಾಗುತ್ತದೆ?

23 ನೀವು / ಸುರೇಶ / ಸುಮತಿ ರಾಣಿಚೆನ್ನಮ್ಮ ವಸತಿಶಾಲೆ, ಬೆಳಗಾವಿ. ಇಲ್ಲಿ ವ್ಯಾಸಂಗ ಮಾಡುತ್ತಿರುವಿರಿ. 4×1=1

ಎಂದು ಭಾವಿಸಿ. "ಆಂಗ್ಲಭಾಷೆ" ನಿಘಂಟುವಿನ '5' ಪ್ರತಿಗಳನ್ನು ಕಳುಹಿಸಿ ಕೊಡಬೇಕೆಂದು, ಕೋರಿ ಸುಭಾಷ ಬುಕ್ ಸ್ಟೋರ್, ಅವೆನ್ಯೂ ರೋಡ್ - ಬೆಂಗಳೂರು - 02 ಇವರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನೀವು ಜಯರಾಂ / ಜಯಶ್ರಿ. ನಿಮ್ಮ ತಂದೆ ರಾಜಣ್ಣ. ಊರು, ಮಡಿಕೇರಿ, ನೀವು ಬಿ.ಎ. ಪದವಿ ಪಡೆದಿರುತ್ತೇನೆ. ಎಂದು ಭಾವಿಸಿಕೊಂಡು "ಆರೋಗ್ಯ ಸಹಾಯಕರು" ಹುದ್ದೆಗೆಂದು, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಆನಂದರಾವ್ ಸರ್ಕಲ್, ಬೆಂಗಳೂರು, ಇವರ ವಿಳಾಸಕ್ಕೆ ಭರ್ತಿಗೊಳಿಸಿದ ಅರ್ಜಿ ಸಲ್ಲಿಸಿ.

24 ಈ ಕೆಳಕಂಡ ದೂರವಾಣಿ ಸಂಭಾಷಣೆಯನ್ನು ಓದಿ. 1×2=2

ನೀವು ಸುಜಾತಾ ಎಂದು ಭಾವಿಸಿ, ನಿಮ್ಮ ತಂದೆ ಬರುವ ವೇಳೆಗೆ ನೀವು ಮನೆಯಲ್ಲಿರಲು ಆಗುವುದಿಲ್ಲ. ಅದಕ್ಕಾಗಿ. "ಮಾಹಿತಿಯನ್ನು ಮೇಜಿನ ಮೇಲೆ ಬರೆದಿಡಿ".

ಸಂಭಾಷಣೆ

ದೂರವಾಣಿ ಕರೆ: ನಾನು ಶ್ರೀ ನಾರಾಯಣ್ ಅವರ ಹತ್ತಿರ ಮಾತನಾಡಬಹುದಾ, ನಾನು ಶರತ್. ಎಸ್. ಇನ್‌ಫೋ ಟೆಕ್ನೋ ಕಂಪೆನಿಯಿಂದ.

ಸುಜಾತಾ: ಕ್ಷಮಿಸಿ, ಅವರು ಮನೆಯಲ್ಲಿಲ್ಲ. ಅತಿಥಿಗಳ ಜೊತೆ ಹೊರಗಡೆ ಹೋಗಿದ್ದಾರೆ. ನಾನು ಅವರ ಮಗಳು.

ದೂರವಾಣಿ ಕರೆ: ಸುಜಾತಾರವರೇ, ನಿಮ್ಮ ತಂದೆಯವರು ಬೆಂಗಳೂರಿನಲ್ಲಿ ಒಂದು ಸಭೆಗೆ ಹಾಜರಾಗಬೇಕಿದೆ. ಆದರೆ ಆ ಸಭೆ ಮುಂದೂಡಲ್ಪಟ್ಟಿದೆ. ದಯವಿಟ್ಟು ಅವರಿಗೆ ಇದನ್ನು ತಿಳಿಸಿ.

ಅವರು "ಸಭೆ"ಗೆ ಹಾಜರಾಗಬೇಕಾದ ದಿನಾಂಕವನ್ನು ಮುಂದೆ ಸೂಚಿಸಲು ಹಾಗೂ "ವಿಮಾನ ಪ್ರಯಾಣವನ್ನು ರದ್ದುಗೊಳಿಸಲು" ಸಹಾಯವಾಗುತ್ತದೆ.

ಸುಜಾತಾ: 'ಶರತ್'ರವರೇ, ನಾನು ಅಗತ್ಯವಾಗಿ ಮಾಡುತ್ತೇನೆ.



Unnati Educations
9899436384, 9654279279

25 'ಬನವಾಸಿ' - ಊರು, ಸುಂದರತಾಣ. 1×6=6

ಈ ವಿಷಯದ ಬಗ್ಗೆ ವಾಕ್ಯವೃಂದ ರಚಿಸಿ

ಅಥವಾ

ಜನಸಂಖ್ಯಾ ಸಮಸ್ಯೆಗಳು - ಈ ವಿಷಯ ಕುರಿತು ಈ ಕೆಳಕಂಡ ಸುಳುಹುಗಳನ್ನು ಆಧರಿಸಿ ಪ್ರಬಂಧ ಬರೆಯಿರಿ.

(1) ಮಿತಿ ಮೀರಿದ ಜನಸಂಖ್ಯೆಯಿಂದಾಗುವ ಅಪಾಯಗಳು

(2) ಜನಸಂಖ್ಯೆ ಹೆಚ್ಚಾಗಲು ಕಾರಣಗಳು

(3) ದೇಶದ ಪ್ರಗತಿಗೆ ಪೂರಕವೆ / ಮಾರಕವೆ

(4) ಪರಿಸರದ ಮೇಲಾಗುವ ಪ್ರಭಾವ

(5) ಜನಸಂಖ್ಯಾ ನಿಯಂತ್ರಣಕ್ಕೆ ಸರ್ಕಾರದ ಕ್ರಮಗಳು

(6) ಜನಸಾಮಾನ್ಯರ ನಿಲುವುಗಳು

## ವಿಭಾಗ - ಸಿ

## (ವ್ಯಾಕರಣ)

26 'ಭರತ ಭೂಮಿ ನನ್ನತಾಯಿ' ನನ್ನ ಪೊರೆವ ತೊಟ್ಟಿಲು. ಈ ವಾಕ್ಯದಲ್ಲಿನ ಅಲಂಕಾರವನ್ನು ವಿವರಿಸಿ. ಅಲಂಕಾರದ ಹೆಸರನ್ನು ಬರೆಯಿರಿ. 1×2=2

27 "ಸಂಸ್ಕೃತ" ಪದಕ್ಕೆ ಕನ್ನಡ ಪದ ಬರೆಯಿರಿ (2 ಕ್ಕೆ) 2×1=2

(1) ಮೃಗ

(2) ಕೋಕಿಲೆ

(3) ಪುಸ್ತಕ

(4) ಲತಾ

28 ಈ ಕೆಳಗೆ ಕೊಟ್ಟಿರುವ ಪದಗಳ ವಿಗ್ರಹ ವಾಕ್ಯ ಮಾಡಿ 'ಸಮಾಸ' ಹೆಸರಿಸಿ (3 ಕ್ಕೆ ಮಾತ್ರ) 1×3=3

(1) ಕೈ ಹಿಡಿ

(2) ಮೈದೋರು

(3) ಉಡುದಾರ

(4) ಜೊಲ್ಲು ಸುರಿಸು



Unnati Educations
9899436384, 9654279279

29 ಬಿಟ್ಟ ಸ್ಥಳವನ್ನು ಸೂಚನೆಗನುಗುಣವಾಗಿ ಭರ್ತಿಮಾಡಿ. 4×1=4

(1) 'ಪೌಷ್ಟಿಕಾಂಶ' ಎಂಬುದು ________ ಸಂಧಿಗೆ ಉದಾಹರಣೆ.

(2) 'ಚಿಕಿತ್ಸೆ' ಈ ಪದಕ್ಕೆ 'ತೃತೀಯ' ವಿಭಕ್ತಿ ಪ್ರತ್ಯಯ ಸೇರಿಸಿದಾಗ ________ ಆಗುತ್ತದೆ.

(3) 'ರಥೋತ್ಸವ' ________ ಸಂಧಿ ಆಗಿದೆ.

(4) "ಈಗೀಗ" ________ ಸಂಧಿ ಆಗಿದೆ.

30 ಈ ಕೆಳಕಂಡ ಪದಗಳಲ್ಲಿ 'ಗುಂಪಿಗೆ' ಸೇರದ ಪದವನ್ನು ಗುರುತಿಸಿ. 1×4=4

(1) ಇಳೆ, ಬೆಳೆ, ಆಕಾಶ, ವಾಯು

(2) ರಾಮನಾಥ, ಕೂಡಲಸಂಗಮದೇವ, ಚೆನ್ನಮಲ್ಲಿಕಾರ್ಜುನ, ಬಸವಣ್ಣ

(3) ಹೆಬ್ಬಾವು, ಹಸಿರು ಹಾವು, ಕಾಳಿಂಗ ಸರ್ಪ, ಓತಿಕ್ಯಾತ

(4) ಗಜಾನನ, ಗಣೇಶ, ವಿಘ್ನೇಶ್ವರ, ಷಣ್ಮುಖ

ಅಥವಾ

ಜೆ.ಎಸ್.ಎಸ್. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಮೈಸೂರು - ಇಲ್ಲಿ ದಾಖಲಾದ ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಕೊಡಲಾಗಿದೆ, ಅವುಗಳ ಸಹಾಯದಿಂದ ರೇಖಾ ಚಿತ್ರವನ್ನು ರಚಿಸಿರಿ:

| ವರ್ಷ: | 2012 | 2013 | 2014 | 2015 | 2016 | 2017 | 2018 | 2018 | 2020 | 2021 |
|---|---|---|---|---|---|---|---|---|---|---|
| ಅಧ್ಯಯನ ಕೇಂದ್ರಗಳು: | 08 | 09 | 12 | 13 | 15 | 20 | 22 | 24 | 30 | 35 |

31 ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ (3 ಕ್ಕೆ ಮಾತ್ರ) 3×2=6

(1) ಬಿತ್ತನೆ ಹೇಗಿರಬೇಕು? ಬಸವಣ್ಣ ಯಾರು?

(2) 'ನನ್ನ ಜನಗಳು' ಹೊಲದಲ್ಲಿ ಯಾವ ಕೆಲಸಗಳನ್ನು ಮಾಡುತ್ತಾರೆ

(3) ಗರತಿ ತನ್ನ ಕಂದ ಹೇಗಿರಬೇಕೆಂದು ಬಯಸುತ್ತಾಳೆ?

(4) ಪ್ರೀತಿ ಚಿರಪರಿಚಿತವಾದುದು ಹೇಗೆ?



Unnati Educations
9899436384, 9654279279

32 ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. **(3 ಕ್ಕೆ ಮಾತ್ರ)** 3×2=6

(1) ಹ್ಯೂಯನ್ ತ್ಸಾಂಗನಿಗೆ "ಇಂಡಿಯಾ" ದೇಶಕ್ಕೆ ಹೋಗಲು ಏಕೆ ಆಸೆಯಾಯಿತು?

(2) ರೋಗಿಗೆ ಧೈರಿಯ ಅಗತ್ಯ ಏನು?

(3) ಬೆಳಗಿನ ಜಾವದಲ್ಲಿ ಎಂತಹ ಭಾವನೆಗಳು ತಲೆದೋರುವುವು?

(4) ಮಧ್ಯಯುಗದಲ್ಲಿ ಯುರೋಪಿನಲ್ಲಿ ಸಂಪ್ರಯವಾದಿಗಳು ರೊಚ್ಚಿಗೆದ್ದುದರ ಪರಿಣಾಮವೇನು?

33 ಈ ಕೆಳಗಿನ ಪ್ರಶ್ನೆಗಳಲ್ಲಿ 'ಒಂದು' ಪ್ರಶ್ನೆಗೆ 30 ರಿಂದ 40 ಪದಗಳಲ್ಲಿ ಉತ್ತರಿಸಿ. 1×3=3

(1) "ಮಾತ್ನಾಡುವ ಅಡಿಕೆ ನಗಾಡುವ ಎಲೆ" ಎಂಬುದು, ಈ ಜಾನಪದ ಕತೆಯ ಸಾರಾಂಶವನ್ನು ಬರೆಯಿರಿ.

(2) ಸೀತೆ ಮತ್ತು ಮುಂಡೋದರಿಯರ ಪಾತ್ರ ಚಿತ್ರಿಸಿ.



Unnati Educations
9899436384, 9654279279